# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.01/2009-10 ದಿನಾಂಕ: 15-09-2009

## -:: ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ 2008-09ನೇ ಸಾಲಿನ 12ನೇ ಹಣಕಾಸು ಯೋಜನೆಯ ಮುಕ್ತನಿಧಿ,ರಸ್ತೆ ಮತ್ತು ಸೇತುವೆ ದುರಸ್ಥಿ ನಿಧಿ ಹಾಗೂ ನಗರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, ಇವುಗಳನ್ನು ನಿರ್ವಹಿಸುವಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನಗರಸಭೆ ದೊಡ್ಡಬಳ್ಳಾಪುರ ಕಛೇರಿಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು ದ್ವಿಪ್ರತಿಯಲ್ಲಿ ಕರೆಯಲಾಗಿದೆ. ಟೆಂಡರ್‌ದಾರರು ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ: 15-10-2009 ಸಾಯಂಕಾಲ 4.00ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ಅರ್ಜಿ ಸಲ್ಲಿಸುವ ದಿನಾಂಕ: 17-09-2009 ರಿಂದ 13-10-2009 ಸಾಯಂಕಾಲ 5.00ಗಂಟೆವರೆಗೆ
2. ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ:22-09-2009 ರಿಂದ 14-10-2009 ಸಾಯಂಕಾಲ 5.00ಗಂಟೆವರೆಗೆ

ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ನೀಡಿರುವ ಕಾಲಾವಧಿ: 90ದಿನಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| | **12ನೇ ಹಣಕಾಸು ಮುಕ್ತನಿಧಿ** | | | |
| 1 | ಟೆಲಿಫೋನ್ ಎಕ್ಸ್‌ಚೇಂಜ್ ಹಿಂಭಾಗದ ರಸ್ತೆಯಲ್ಲಿ ತಡೆಗೋಡೆ ನಿರ್ಮಿಸುವುದು | 72000 | 1800 | 500.00+ತೆರಿಗೆ |
| 2 | ವಾರ್ಡ್ ನಂ.28ರ ನಾಗಲಾಂಭಿಕೆ ಮನೆಯ ಹತ್ತಿರವಿರುವ ಕೊಳವೆಬಾವಿಯಿಂದ ಮಧುಗಿರಿರಸ್ತೆಯ ಹಾಸ್ಟೆಲ್ ವರೆಗೆ 4" ಮುಖ್ಯ ಪೈಪ್‌ಲೈನ್ ಹಾಕುವ ಕೆಲಸ. | 250000 | 6250 | 500.00+ತೆರಿಗೆ |
| 3 | ವಾರ್ಡ್ ನಂ.27ರ ರೋಜಿಪುರದ ಕೋರ್ಟ್ ರಸ್ತೆಯಲ್ಲಿ 4" ಮುಖ್ಯ ಪೈಪ್ ಲೈನ್ ಹಾಕುವ ಕೆಲಸ. | 200000 | 5000 | 500.00+ತೆರಿಗೆ |
| 4 | ನಗರಸಭಾ ವ್ಯಾಪ್ತಿಯಲ್ಲಿ ಬರುವ 3 ಕೊಳವೆಬಾವಿಗಳಿಗೆ ಸಬ್ ಮರ್ಸಿಬಲ್ ಮೋಟಾರು ಪಂಪ್,ಕೇಬಲ್ ಮತ್ತು ಕಂಟ್ರೋಲ್ ಪ್ಯಾನಲ್ ಖರೀದಿಸುವ ಕೆಲಸ. | 250000 | 6250 | 500.00+ತೆರಿಗೆ |
| 5 | ವಾರ್ಡ್ ನಂ.3ರ ಡಿ. ಕ್ರಾಸ್ ಸಾಮಿಲ್ ಹತ್ತಿರ ಕಲ್ವರ್ಟ್ ಕಾಮಗಾರಿ | 17000 | 500 | 500.00+ತೆರಿಗೆ |
| 6 | ವಾರ್ಡ್ ನಂ.3ರ ಡಿ.ಕ್ರಾಸ್ ಸಾಮಿಲ್ ಹತ್ತಿರ ಆರ್.ಸಿ.ಸಿ. ಚರಂಡಿ ಮಾಡುವುದು | 47000 | 1200 | 500.00+ತೆರಿಗೆ |
| 7 | ವಾರ್ಡ್ ನಂ.1ರ ಸುನಿಲ್ ಮನೆ ಮುಂಭಾಗ ಆರ್.ಸಿ.ಸಿ. ಚರಂಡಿ ಮಾಡುವುದು | 95000 | 2400 | 500.00+ತೆರಿಗೆ |
| 8 | ವಾರ್ಡ್ ನಂ.11ರ ಕರೇನಹಳ್ಳಿ ಗೋವಿಂದಪ್ಪನವರ ಅಂಗಡಿ ಪಕ್ಕದ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 30000 | 750 | 500.00+ತೆರಿಗೆ |
| 9 | ನೇಯ್ಗೆ ಬೀದಿ ಶಾಲೆಯ ಹತ್ತಿರ ಡೆಕ್ ಸ್ಲ್ಯಾಬ್ ಕಲ್ವರ್ಟ್ ಮಾಡುವುದು | 50000 | 1250 | 500.00+ತೆರಿಗೆ |
| | **12ನೇ ಹಣಕಾಸು ರಸ್ತೆ ಮತ್ತು ಸೇತುವೆ ದುರಸ್ಥಿ** | | | |
| 10 | ಜೆ.ಸಿ. ಸರ್ಕಲ್‌ನಿಂದ ಹಳೇಬಸ್ ನಿಲ್ದಾಣದ ಮುಖಾಂತರ ಗಾಂಧಿ ಸರ್ಕಲ್‌ವರೆಗೆ ಆಯ್ದ ಭಾಗಗಳಲ್ಲಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕೆಲಸ | 375000 | 9500 | 500.00+ತೆರಿಗೆ |

| | | | | |
|---|---|---|---|---|
| | **ನಗರಸಭಾ ನಿಧಿ** | | | |
| 11 | ಹಳೇ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಮೂತ್ರಾಲಯ ತೆರವುಗೊಳಿಸುವುದು ಮತ್ತು ಸುಲಭ ಶೌಚಾಲಯದ ಆವರಣವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ. | 425000 | 10625 | 500.00+ತೆರಿಗೆ |

**ಷರತ್ತುಗಳು:-**

1. ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಹಣವನ್ನು ಡಿ.ಡಿ ಅಥವಾ ಕಛೇರಿಯಲ್ಲಿ ನಗದುಪಾವತಿಸಿದ ರಸೀದಿ ಹಾಗೂ ಇ.ಎಂ.ಡಿ. ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ ಅಥವಾ ಎಫ್.ಡಿ.ಆರ್ ಮೂಲಕ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.

2. ಕಾಮಗಾರಿಗಳ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ಅಂದಾಜಿನ ವ್ಯತ್ಯಾಸದ ಮೊತ್ತದ ಹಣವನ್ನು ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಿ ಸಲ್ಲಿಸಬೇಕು, ತಪ್ಪಿದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

3. ಕಾಮಗಾರಿಗಳು ಗುತ್ತಿಗೆದಾರರ ಟೆಂಡರ್ ದರಗಳು ಒಂದು ವರ್ಷ (ಟೆಂಡರ್ ಕರೆದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.

4. ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಅಂತಿಮ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

5. ಎರಡು ವರ್ಷ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರೇ ಬರಿಸುವುದು.

6. ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ.

7. ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಮತ್ತು www.doddaballapurcity.gov.in ನಲ್ಲಿ ಪಡೆದು ತಿಳಿದುಕೊಳ್ಳುವುದು.

| | | | |
|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- |
| **(ಮಲ್ಲಿಕಾರ್ಜುನ್)** | **(ಜಿ.ಎಸ್.ಸೋಮರುದ್ರಶರ್ಮ)** | **(ಡಿ.ಎಂ.ಚಂದ್ರಶೇಖರ್)** | **(ಎಸ್.ಪ್ರಭುದೇವ್ ಕೆ.ಎಂ.ಎ.ಎಸ್.)** |
| ಅಧ್ಯಕ್ಷರು | ಉಪಾಧ್ಯಕ್ಷರು | ಸ್ಥಾಯಿ ಸಮಿತಿ ಅಧ್ಯಕ್ಷರು | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ |

**"ನಕಲು"**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ**